

ಎಲ್ಲಾ ಮೊಮ್ಮಕ್ಕಳ ಪೈಕಿ ಮಗಳ ಮಗನಾದ ಶಂಕರನ ಜೊತೆ ಹೆಚ್ಚು ಪ್ರೀತಿ ಇತ್ತು. ಅದಕ್ಕೆ ಕಾರಣವೂ ಇತ್ತು. ಏಳು ತಿಂಗಳಿಗೇ ಹುಟ್ಟಿದ್ದ ಶಂಕರನು ಒಂದೂವರೆ ಕೆ.ಜಿ.ಗಿಂತ ಕಡಿಮೆ ತೂಕವಿದ್ದ ಕಾರಣ ಐ.ಸಿ.ಯು.ನಲ್ಲಿಟ್ಟಿದ್ದರು. ಅವನು ಉಳಿಯುವುದೇ ಅನುಮಾನ ಎಂದು ವೈದ್ಯರು ಹೇಳಿದ್ದರು. ಆದರೂ ಹೇಗೋ ಪವಾಡವೆಂಬಂತೆ ಉಳಿದುಕೊಂಡು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಮನೆಗೆ ಬಂದ, ಅಂಗೈಯಲ್ಲಿ ಹಿಡಿದುಕೊಳ್ಳಬಹುದಾದ ಆ ಪುಟ್ಟ ಮಗುವನ್ನು ಪಾರ್ವತಜ್ಜಿ ತನ್ನ ಕೈಯಲ್ಲಿಟ್ಟುಕೊಂಡು ಹಗಲುರಾತ್ರಿ ಸೇವೆ ಮಾಡಿ, ಒಂಬತ್ತು ತಿಂಗಳಿಗೆ ಗುಂಡು ಗುಂಡಾದ ಮುದ್ದಾದ ಮಗುವನ್ನಾಗಿ ಪರಿವರ್ತಿಸಿದ್ದಳು. ಆ ಮಗು ಮತ್ತು ಬಾಣಂತಿಗಾಗಿ ಒಂದು ಹಸುವಿನ ಹಾಲು, ಬೆಣ್ಣೆ, ತುಪ್ಪ ಎಲ್ಲವನ್ನು ಮೀಸಲಿಟ್ಟಿದ್ದಳು. ಶಂಕರನನ್ನು ಉಳಿಸಿಕೊಳ್ಳಲು ಪಾರ್ವತಜ್ಜಿ ಮಾಡದ ಸೇವೆಯಿಲ್ಲ, ಹರಕೆ ಹೊರದ ದೇವರಿಲ್ಲ. ಹೀಗೆ ಉಳಿಸಿಕೊಂಡ ಶಂಕರನ ಮೇಲೆ ಪಾರ್ವತಜ್ಜಿಗೆ ಇತರೆ ಮೊಮ್ಮಕ್ಕಳಿಗಿಂತಲೂ ಸ್ವಲ್ಪ ಜಾಸ್ತಿ ಪ್ರೀತಿಯಿತ್ತು.

ಶಂಕರನಿಗೂ ಪಾರ್ವತಜ್ಜಿಯ ಊರಿಗೆ ಹೋಗುವುದೆಂದರೆ ಬಹಳ ಇಷ್ಟ. ಶಂಕರನ ಊರು ಬಯಲು ಸೀಮೆಯ ಪ್ರದೇಶ. ಆದರೆ ಅಜ್ಜಿಯ ಊರು ಮಲೆನಾಡಿನ ಸೆರಗಿನಂತಿದ್ದ ಒಂದು ಹಳ್ಳಿ. ಬಸ್ಸಿನಲ್ಲಿ ಅಜ್ಜಿಯ ಊರಿಗೆ ಹೋಗುವಾಗಲೆಲ್ಲಾ ಕಿಟಕಿ ಪಕ್ಕದಲ್ಲಿ ಕುಳಿತುಕೊಂಡು ಮಲೆನಾಡಿನ ಸೊಬಗನ್ನು ಕಣ್ಣಿಗೆ ತುಂಬಿಕೊಳ್ಳುತ್ತಿದ್ದ. ದಾರಿಯುದ್ದಕ್ಕೂ ರಸ್ತೆಯ ಬದಿಯಲ್ಲಿ ನೋಡಿದಷ್ಟೂ ಮುಗಿಯದ ಹಸಿರು ಗದ್ದೆಗಳು, ತೋಟಗಳು, ಬೆಟ್ಟಗುಡ್ಡಗಳು ಶಂಕರನನ್ನು ವಿಸ್ಮಯಗೊಳಿಸುತ್ತಿದ್ದವು. ಅಜ್ಜಿಯ ಊರಿಗೆ ಹೋದರೆ ಅಲ್ಲಿ ಮನೆಗಿಂತ ಹೆಚ್ಚಾಗಿ ತೋಟ, ಗದ್ದೆಗಳಲ್ಲೇ ಮಾವನ ಮಕ್ಕಳೊಂದಿಗೆ ಆಟವಾಡಿಕೊಂಡು, ಬಾವಿಯಲ್ಲಿ ಈಜುತ್ತಾ, ಆಲೆಮನೆಯಲ್ಲಿ ಬಿಸಿಬೆಲ್ಲ